

## ಅಪಭ್ರಂಶವಾಗುವ ಶಬ್ದಗಳು

ಯಾವುದನ್ನೂ ಬರೆದು ಕಲಿಯಲು ಹೋಗದ ಇವರು ಬಾಯಿಪಾಠ ಮಾಡುತ್ತಾರೆ. ಪರೀಕ್ಷೆಯಲ್ಲಿ ಸಮಯ ಸಾಕಾಗಲ್ಲ ಎಂಬ ಸಾರ್ವಕಾಲಿಕ ದೂರನ್ನು ಒಕ್ಕೊರಲಿನಿಂದ ಹೇಳುತ್ತಾರೆ. ಪೂರ್ವಾಭ್ಯಾಸವಿಲ್ಲದೆ ನೇರವಾಗಿ ಪರೀಕ್ಷೆಯಲ್ಲಿ ಬರೆಯತೊಡಗಿದರೆ ಇನ್ನೇನಾಗುತ್ತದೆ? ಒಂದಷ್ಟು ತಪ್ಪುಗಳಾಗುತ್ತವೆ ಉದಾಹರಣೆಗೆಂದು ಕೆಲವು ಪದಗಳ ಪಟ್ಟಿ ನೋಡೋಣ.

ಅಲ್ಲಿದ್ದವರು– ಅಳಿದವರು, ಅಭಿನವ– ಅಭಿನಯ, ಅವಮಾನ– ಹವಮಾನ, ಅನುಮಾನ– ಹನುಮಾನ, ಅಲೆ– ಅಳೆ, ಆಸ್ಪತ್ರೆ– ಅಪ್ಪಸತ್ತರೆ, ಆಗಲಿ–ಅಗಲಿ, ಅಲ್ಲಿ– ಹಲ್ಲಿ, ಆದರ– ಹಾದರ, ಇಲ್ಲಿ– ಇಲಿ, ಇತಿಹಾಸ– ಹಿತಿಹಾಸ, ಎದೆ– ಹೆದೆ, ಕದಡು– ಕಾದಾಡು, ಕಡುಪಾಪ– ಕಾಡುಪಾಪ, ಕಳೆತ– ಕೊಳೆತ, ತಪ್ಪು– ತುಪ್ಪ, ದುಃಖಿತನಾಗುತ್ತಾನೆ–ದುಃಖಿತ ನಗುತ್ತಾನೆ, ಧೀಮಂತ– ದಿವಂಗತ, ನಾರಿ– ನರಿ... ಹೀಗೆ.. ಮಕ್ಕಳ ಕನ್ನಡ ಬರವಣಿಗೆ, ಅಕ್ಷರ, ಶಬ್ದಗಳು ಅಪಭ್ರಂಶವಾಗುತ್ತಿರುವುದು ಶೋಚನೀಯ.

ಉದ್ದೂರು ಬರೆಯಲು ಊದೂರು ಎಂದು ಬರೆಯುತ್ತಿವೆ, ಓದುತ್ತಿವೆ.

ನಾವೆಲ್ಲಾ ಶಾಲೆ ಹೋಗುವಾಗ ದಿನದ ಕಡೆಯ ಅವಧಿಯಲ್ಲಿ ಯಾರಾದರೂ ಶಿಕ್ಷಕರು ರಜೆಯಲ್ಲಿದ್ದರೆ ಅವರ ತರಗತಿಗಳಲ್ಲಿ ಉಕ್ತಲೇಖನ ಬರೆಸುತ್ತಿದ್ದರು. ಈಗಿಲ್ಲ ಇಂಗ್ಲಿಷ್‌ನಲ್ಲಿ ಮಾತ್ರ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪೆಲ್ಲಿಂಗ್ ಹೇಳುವ ಸ್ಪರ್ಧೆಗಳು ಆಯೋಜಿಸಲ್ಪಡುತ್ತಿವೆ. ಹಾಗೆ ಕನ್ನಡದಲ್ಲಿಯೂ 'ಕಾಗುಣಿತ ಶಿರೋಮಣಿ' ಎಂಬ ಶೀರ್ಷಿಕೆಯಡಿ ಕಾಗುಣಿತ ಸ್ಪರ್ಧೆಗಳನ್ನು ಏರ್ಪಡಿಸಿದರೆ ಚೆನ್ನಾಗಿರುತ್ತದೆ. ಹಲವರ್ಷಗಳ ಹಿಂದೆ ಪಾಠಗಳು ಮುಗಿದ ನಂತರ ಅದಕ್ಕೆ ಸಂಬಂಧಿಸಿದ ಟಿಪ್ಪಣಿಗಳಲ್ಲಿ ತರಗತಿಗಳಲ್ಲಿ ಹೇಳಿ ಬರೆಸುತ್ತಿದ್ದರು. ಈಗ ವಿದ್ಯಾರ್ಥಿಗಳಲ್ಲಿ ನೋಟ್ಸ್ ಮಾಡುವ ಕ್ರಮ ತಪ್ಪುತ್ತಿದೆ. ಮಿಸ್‌ಗೈಡ್ ಮಾಡುವ ಗೈಡ್‌ಗಳ ಮೊರೆ ಹೋಗುವಿಕೆ ಬರವಣಿಗೆಯ ಸಾಮರ್ಥ್ಯದ ಮುಂದಿನ ವಿಘ್ನ. ನೋಟ್ಸ್, ನೆಟ್ ಬ್ರೌಸಿಂಗ್, ಆನ್‌ಲೈನ್ ಕೋಚಿಂಗ್... ನಂತರದ ವಿಘ್ನಗಳು.



ಕಾಲದ ಹರಿವಿನಲ್ಲಿ ಪ್ರಶ್ನೆಪತ್ರಿಕೆ ಸಂಯೋಜನೆಯಲ್ಲಿ ಅನೇಕ ಬದಲಾವಣೆಗಳಾಗಿವೆ. ವಾಕ್ಯಗಳಲ್ಲಿ ಅಲ್ಲ ಪದಗಳ ಸಂಖ್ಯೆಯಲ್ಲಿ ಉತ್ತರ ನಿರೀಕ್ಷಿಸುವುದು, ಬಹು ಆಯ್ಕೆ ಮಾದರಿಯ ಪ್ರಶ್ನೆಪತ್ರಿಕೆ ನೀಡುವುದು, ಮಕ್ಕಳ ಲೇಖನ ಸಾಮರ್ಥ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿವೆ. ಧ್ವನಿ ಲಿಪ್ಯಂತರ ತಂತ್ರಾಂಶ ಬಂದಿರುವುದು ವಿದ್ಯಾರ್ಥಿಗಳ ಕಲಿಕಾ ದೃಷ್ಟಿಯಿಂದ ಅತ್ಯಂತ ದೊಡ್ಡ ವಿಘ್ನ ಎನ್ನಬಹುದು.

### ಶಬ್ದಕೋಶ ನೋಡುವುದು ಹೇಗೆ?

ಆಧುನಿಕ ತಂತ್ರಜ್ಞಾನದ ಕಾಲವೆಂದು ಬೀಗುವ ನಾವು ನಮ್ಮ ಮಕ್ಕಳಿಗೆ ಶಬ್ದಕೋಶ ನೋಡುವ ಕ್ರಮ ಹೇಳಿಕೊಟ್ಟಿಲ್ಲ. ಗೂಗಲ್ ಸರ್ಚ್ ನೋಡು ಎಂದು ಸುಲಭವಾಗಿ ಹೇಳಿದ್ದೇವೆ. ಪದಬಂಧಗಳನ್ನು ವಾಕ್ಯ ಸರಿಪಡಿಸುವಿಕೆಯಂತಹ ಚಟುವಟಿಕೆಗಳ ಪರಿಚಯ ಮಾಡಿಸಿಲ್ಲ. ಶಬ್ದದಾರಿದ್ರ್ಯ ನಮ್ಮ ವಿದ್ಯಾರ್ಥಿಗಳನ್ನು ಬಾಧಿಸುತ್ತಿದೆ. ಅದೂ ಇದೂ, ಹಾಗೆ, ಹೀಗೆ ಎಂದು ಶಬ್ದಕ್ಕೆ ಚಡಪಡಿಸುತ್ತಿದ್ದಾರೆ. 'ಅರ್ಥಗಳಲ್ವ! ಪರೀಕ್ಷಾ ಹಾಲ್‌ನಲ್ಲೇ ಕೇಳಿ, ನೋಡಿ ಬರೆದರಾಯ್ತು' ಎಂಬ ಹುಂಬತನವಿದೆ.

ಗ್ರಂಥಸ್ಥ ಭಾಷೆಗೂ ಆಡುಭಾಷೆಗೂ ಇರುವ ವ್ಯತ್ಯಾಸವೇ ತಿಳಿದಿಲ್ಲ. ಭಗವಂತ ಬರೆಯಲು ಬೆಗ್‌ವಂತ ಎಂದು ಬರೆಯುತ್ತಾರೆ. ವಾಮನ (ಕಾವ್ಯ ಮಿಮಾಂಸಕರಲ್ಲಿ ಒಬ್ಬ) ಬರೆಯಲು ವಮನ (ವಾಂತಿ) ಎಂದು ಬರೆಯುತ್ತಾರೆ. ದೂರಾಲೋಚನಗೆ ದುರಾಲೋಚನೆ ಎಂದು ಬರೆಯುತ್ತಾರೆ. 'ಮಳೆ ಧಾರಾಕಾರವಾಗಿ ಬರುತ್ತಿದೆ' ಎಂದು ಬರೆಯಲು 'ಮಳೆ ನೀರು ದಾರಾಕಾರ (ದಾರದ ಆಕಾರ) ಬರುತ್ತಿದೆ' ಎಂದು ಬರೆದು ನಮ್ಮ ವ್ಯವಸ್ಥೆಯನ್ನು ಅಣಕಿಸುತ್ತಿದ್ದಾರೆ.

### ಸ್ಮಾರ್ಟ್‌ಕ್ಲಾಸ್

ಆಧುನಿಕತೆ ಎಂಬಂತೆ ಶಿಕ್ಷಕರೂ ಸಹ ಬ್ಲಾಕ್‌ಬೋರ್ಡ್‌ಗಳಲ್ಲಿ ಬರೆದು ಪಾಠ ಮಾಡುವುದು ಸ್ಮಾರ್ಟ್‌ಕ್ಲಾಸ್‌ಗಳಿಂದ ಕಡಿಮೆ ಯಾಗಿದೆ. ಪೇಪರ್ ಓದಿ ಪೇಪರ್ ಕಟ್ಟಿಂಗ್ಸ್ ಇಡುತ್ತಿದ್ದ ಕಾಲವಲ್ಲ. ಈಗ ಕಂಪ್ಯೂಟರ್ ಮೂಲಕ ಶಿಕ್ಷಣ ನೀಡುವುದು ಖಾಸಗಿ ವಿದ್ಯಾಸಂಸ್ಥೆಗಳ ಹೆಚ್ಚುಗಾರಿಕೆಯಾಗಿದೆ. ಎಲೆಕ್ಟ್ರಾನಿಕ್ ಉಪಕರಣಗಳ ಮೂಲಕ ಸಾಕಷ್ಟನ್ನು ನಮ್ಮ ಮಕ್ಕಳು ಕಲಿಯುತ್ತಾರೆ ನಿಜ. ಆದರೆ ಸೃಜನಶೀಲತೆಯನ್ನು ಕಳೆದುಕೊಳ್ಳುತ್ತಾರೆ. ನುಡಿಭಾಷೆ, ನೋಡುಭಾಷೆ ಚೆನ್ನಾಗಿಯೇ ಇವೆ. ಆದರೆ ಬರಹದ ಭಾಷೆ ತನ್ನ ಘನತೆಯನ್ನು ಕಳೆದುಕೊಳ್ಳುತ್ತಿದೆ. ಶಿಕ್ಷಣ ತಜ್ಞರು, ಶಿಕ್ಷಕರು, ಪೋಷಕರು ಇತ್ತ ಗಮನಹರಿಸಬೇಕಾಗಿದೆ.

ಇಂದಿನ ಮಕ್ಕಳಲ್ಲಿ ಬರವಣಿಗೆಯ ಸಾಮರ್ಥ್ಯ ಕುಂಠಿತಗೊಂಡಿದೆ. ಸರಳವಾದ ಪದಗಳನ್ನು ಓದಲು ಬಾರದಿದ್ದರೆ ಇನ್ನು ಗಂಭೀರ ಓದನ್ನು ಹೇಗೆ ನಿರೀಕ್ಷಿಸುವುದು? ನಡೆನುಡಿಯನ್ನು ಹೇಗೆ ಜೊತೆಗೆ ಹೇಳುತ್ತೇವೆಯೋ ಹಾಗೆ ಬರಹವನ್ನು ಸೇರಿಸಿಕೊಂಡು ಕೈಬರವಣಿಗೆಗೆ ಆದ್ಯತೆ ನೀಡಿದರೆ ನಮ್ಮ ಮಕ್ಕಳಲ್ಲಿ ಇನ್ನಷ್ಟು ಸೃಜನಶೀಲತೆಯನ್ನು ಬೆಳೆಸಿದಂತಾಗುತ್ತದೆ. ■